ಸಂಪಾದಕ ಮಂಡಳಿ

ವೈ. ಮೋಹನ ರಾವ್
ಯು. ಅರವಿಂದ ಕುಮಾರ್
ಎಚ್.ಎನ್. ಶ್ಯಾನುಭಾಗ್
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್
ರೂಪಾ ವಸಂತ ರಾವ್
ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ ರಾವ್
ಯು. ಪ್ರಫುಲ್ಲಚಂದ್ರ ರಾವ್



ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಲೇಖನಗಳು ಅಥವಾ ಪತ್ರಿಕೆಯ ಇತರ ಯಾವುದೇ ವಿಷಯಗಳ ಬಗ್ಗೆ ಯಾವುದೇ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.


## ಚಿಂತನ

**'ಹಣ'ಗಳಿಸಬೇಕು, ಗಳಿಸಿದ್ದನ್ನು ಬೆಳೆಸಬೇಕು, ಬೆಳೆಸಿದ್ದನ್ನು ಉಳಿಸಬೇಕು**, ಇದು ನಾಣ್ಣುಡಿ: ಹಣಗಳಿಸುವುದು ಹೇಗೆ? ಎರಡು ಮಾರ್ಗಗಳಿಂದ ಹಣಗಳಿಸಬಹುದು. ಸನ್ಮಾರ್ಗದಿಂದ ಮತ್ತು ದುಷ್ಟ ಮಾರ್ಗದಿಂದ. ದುಷ್ಟ ಕೃತ್ಯದಿಂದ ಗಳಿಸಿದ ಸಂಪತ್ತು ತಾತ್ಕಾಲಿಕ. ಅದು ಹೆಚ್ಚು ಸಮಯ ನಿಲ್ಲದು. ತಾನು ದುಷ್ಕೃತ್ಯದಿಂದ ಗಳಿಸಿದ ಈ ಸಿರಿಯನ್ನು ಪ್ರತಿಷ್ಠೆಗಾಗಿ, ತೋರಿಕೆಗಾಗಿ ದಾನ ಮಾಡಿದರೂ ಮಾಡಿದಾತನಿಗೆ ಅದರ ಫಲ ದಕ್ಕದು. ದಾನ ಪಡೆದಾತ ತನ್ನ ಪ್ರಾಪ್ತಿಯ ಬಗ್ಗೆ ಸ್ವಲ್ಪ ಚಿಂತನೆಗೈದರೆ ಒಳಿತು.

ಸತ್ಕೃತ್ಯದಿಂದ ಸಂಗ್ರಹಿಸಿದ ಸಿರಿಯು ಕೊನೆಯವರೆಗೆ ನಿಲ್ಲುವುದು ಎಂದರೆ ತನ್ನ ದೈಹಿಕಶ್ರಮ, ಬುದಿಶಕ್ತಿ, ಪ್ರಾಮಾಣಿಕತನ ಮೊದಲಾದ ರೀತಿಯಿಂದ ಬಂದ ಪ್ರಾಪ್ತಿಯ ಸಂಪತ್ತು. ಇಂದಿನ ದಿನಗಳಲ್ಲಿ ಇಂತಹ ರೀತಿಯಲ್ಲಿ ಧನಸಂಗ್ರಹಿಸುವವರ ಸಂಖ್ಯೆ ಸಮಾಜದಲ್ಲಿ ಕಡಿಮೆ. ಕೂಡಲೇ, ಈಗಲೇ ಶ್ರೀಮಂತರಾಗಬೇಕೆಂಬ ದುರಾಶೆಯಿಂದ ದುಷ್ಟ ಮಾರ್ಗದಲ್ಲಿ ನಡೆಯುವವರು ನಮ್ಮ ಸುತ್ತಮುತ್ತಲು ತುಂಬಿದ್ದಾರೆ ಎಂದರೆ ತಪ್ಪಾಗಲಾರದು. ಹೀಗೆ ಸತ್ಕರ್ಮದಿಂದ ಸಂಗ್ರಹಿಸಿದ ಧನ ನಮಗರಿವಿಲ್ಲದಂತೆಯೇ ಬೆಳೆಯುವುದು. ಧನ ಬೆಳೆದಾಗಲೂ ಅದು ನಿಂತನೀರಾಗಬಾರದು ಬೆಳೆದ ಈ ಧನದ ಒಂದು ನಿರ್ಧಿಷ್ಟ ಅಂಶವನ್ನು ದಾನ ಮಾಡುವುದು ಬಹಳ ಮುಖ್ಯ. 'ದಾನ ನೀಡುವಾಗ ಸತ್ಪಾತ್ರರಿಗೆ ನೀಡು' ಎಂದು ಹೇಳಿರುವಂತೆ ದಾನ ಪಡೆಯಲು ಯಾರು ಯೋಗ್ಯರೆಂದು ಚೆನ್ನಾಗಿ ತಿಳಿದು ದಾನ ನೀಡಬೇಕು. ಅಪಾತ್ರರಿಗೆ ದಾನ ನೀಡುವುದು ತನ್ನಲ್ಲಿರುವ ಸಂಪತ್ತಿನ ನಷ್ಟಕ್ಕೆ ಕಾರಣವಾಗಬಹುದು. ಎಂದರೆ ಗಳಿಸಿದ ಸಿರಿಯನ್ನು ಅತಿಥಿ ಸತ್ಕಾರ, ವಿದ್ಯಾರ್ಥಿಗಳ ವಿದ್ಯಾರ್ಜನೆ, ರೋಗಿಗಳ ವೈದ್ಯಕೀಯ ಶುಶ್ರೂಷೆ, ವೃದರಿಗೆ ನೆರವು ಮೊದಲಾದ ಚಟುವಟಿಕೆಗಳಿಗಾಗಿ ದಾನ ನೀಡಿದಲ್ಲಿ ಅದು ಶ್ರೇಷ್ಠ ದಾನವಾಗಬಹುದು. ಇಂತಹ ದಾನದಿಂದ ಆತನಿಗೆ ಲಕ್ಷ್ಮೀ ಕೃಪೆಯಾಗುವುದರಲ್ಲಿ ಸಂಶಯವಿಲ್ಲ, ಅಲ್ಲದೆ ಆತನ ಆಯುಷ್ಯಾಂತದಲ್ಲಿ ಆತನಿಗೆ ಸ್ವರ್ಗದ ಬಾಗಿಲು ತೆರೆದಿರುವುದೆಂದು ಶಾಸ್ತ್ರಾಧಾರವಿದೆ. ಆದ್ದರಿಂದ ಹಣಗಳಿಸಿ-ಬೆಳೆಸಿ-ಉಳಿಸಬೇಕಾದಲ್ಲಿ ಈ ರೀತಿಯ ಸತ್ಪಾತ್ರರನ್ನು ಹುಡುಕಿ ದಾನ ನೀಡುವುದೇ ಶ್ರೇಷ್ಠವೆಂದು ತಿಳಿಯೋಣ.

# ದುರ್ಗೆಯ ನವ ಅವತಾರಗಳು

- ಕೃಷ್ಣಕುಮಾರ್ ರಾವ್ ಮಟ್ಟು

**ಭಾರತದಾದ್ಯಂತ ಅತ್ಯಂತ ವಿಜೃಂಭಣೆಯಿಂದ ಮತ್ತು ಅನನ್ಯ ಭಕ್ತಿಭಾವದಿಂದ ಆಚರಿಸಲ್ಪಡುವುದೇ ನವರಾತ್ರಿ. ಹಬ್ಬಗಳ ಆಚರಣೆ ನಮ್ಮ ಆಂತರ್ಯದ ಶುದ್ಧಿಗಾಗಿ ಮತ್ತು ಬೆಳವಣಿಗೆಗಾಗಿ ರೂಪಿಸಲ್ಪಟ್ಟ ವಿಶೇಷ ಸಮಯವಾಗಿದೆ. ಆದ್ದರಿಂದ ಇಂತಹ ಹಬ್ಬಗಳ ಅಲ್ಪ ಸಮಯದಲ್ಲಾದರೂ ಆರಾಧನೆ ಸಾಧನೆಗೆ ನಾವು ಮನವನ್ನು ಮೀಸಲಿಡಬೇಕಾದುದು ಅಗತ್ಯ.**

ದೇವಿ ಆದಿಪರಾಶಕ್ತಿ ಈ ಒಂಬತ್ತು ದಿನಗಳಲ್ಲಿ ಒಂಭತ್ತು ಅದ್ಭುತ ಆಕರ್ಷಕ ರೂಪಗಳನ್ನು ತಾಳಿ ತನ್ನ ಒಂಭತ್ತು ದೈವೀಪ್ರಭಾವಗಳನ್ನು ತೋರುವಳು. ನಾವು ಈ ಒಂಭತ್ತು ದಿನವೂ ನಮ್ಮನ್ನು ನಾವು ಪರಿವರ್ತಿಸಿಕೊಳ್ಳಲು ಅವಕಾಶ ಕಲ್ಪಿಸಿದ್ದಾಳೆ. ಹೀಗೆ ಆಧ್ಯಾತ್ಮದಲ್ಲಿ ಬಿತ್ತಿದ ಬೀಜವು ವರ್ಷಾಂತ್ಯದವರೆಗೆ ಸಮೃದ ಫಲನೀಡುತ್ತವೆ.

ಅಂತಹ ಆದಿಪರಾಶಕ್ತಿ ರೂಪಗಳಾದ ದುರ್ಗೆಯ ನವ ಅವತಾರಗಳ ಬಗ್ಗೆ ತಿಳಿದುಕೊಂಡು ಅದರಂತೆ ಪೂಜಿಸಿದರೆ ಹೆಚ್ಚು ಫಲ ಪ್ರಾಪ್ತಿ ಎಂದು ಆರ್ಯೋಕ್ತಿ. ಅಂತೆಯೇ ದುರ್ಗೆಯ ನವಅವತಾರಗಳನ್ನು ಸಚಿತ್ರವಾಗಿ ಈ ಕೆಳಗಿನಂತೆ ವಿವರಿಸಲಾಗಿದೆ.

**1. ಶೈಲಪುತ್ರಿ**

ಶ್ಲೋಕ : ವಂದೇ ವಾಮಭಿತಲಾಬಾಯ ಚಂದ್ರಾರ್ಧಕೃತ ಶೇಖರಾಮ್।

ವೃಷಾರೂಢಾಂ. ಶೂಲಧರಾಂ ಶೈಲಪುತ್ರೀಂ ಯಶಸ್ವಿನೀಮ್ ॥

ದುರ್ಗೆಯ ಮೊದಲ ಸ್ವರೂಪವೇ ಶೈಲಪುತ್ರೀ. ಪರ್ವತರಾಜ ಹಿಮವಂತನ ಪುತ್ರಿ ಪಾರ್ವತಿ, ಹೈಮತೀ ಎಂಬ ಹೆಸರುಗಳು ಇವೆ.

ವೈಷ್ಣವೀ ವಾಹನೆಯಾದ ಇವಳ ಬಲಗೈಯಲ್ಲಿ ತ್ರಿಮುಖ ತ್ರಿಶೂಲ, ಎಡಗೈಯಲ್ಲಿ ಕಮಲಪುಷ್ಪ ಇದೆ.

ಇವಳು ಹಿಂದಿನ ಜನ್ಮದಲ್ಲಿ ದಕ್ಷಪ್ರಜಾಪತಿಯ ಮಗಳಾದ 'ಸತಿ'ಯಾಗಿ ಈಶ್ವರನ ಮಡದಿಯಾಗಿದ್ದಳು. ದಕ್ಷಯಜ್ಞಕ್ಕೆ ಪತಿಬೇಡವೆಂದರೂ ಹೋಗಿ ತವರಿನಲ್ಲಿ ಅವಮಾನಿತಗಳಾಗಿ ಯೋಗಾಗ್ನಿಯಲ್ಲಿ ತನ್ನನ್ನು ಸುಟ್ಟುಕೊಂಡಳು.

ಮತ್ತೆ ಮುಂದಿನ ಜನ್ಮದಲ್ಲಿ ಹಿಮವಂಶನ ಮಗಳಾಗಿ ಹುಟ್ಟಿ ಶಿವನನ್ನು ವರಿಸಿದಳು. ನವರಾತ್ರಿಯ ಮೊದಲ ದಿನದ ಪೂಜೆಯನ್ನು ಶೈಲಪುತ್ರಿಯ ಉಪಾಸನೆ ಮಾಡಲಾಗುತ್ತದೆ. ಯೋಗಿಗಳು ತಮ್ಮ ಮನವನ್ನು ಮೂಲಾಧಾರ ಚಕ್ರದಲ್ಲಿ ನೆಲೆಗೊಳಿಸುತ್ತಾರೆ.

**2. ಬ್ರಹ್ಮಚಾರಿಣೀ**

ಶ್ಲೋಕ : ದಧಾನ ಕರಪದ್ಮಾಭ್ಯಾಮಕ್ಷಮಾಲಕಮಂಡಲೂ ದೇವಿ ಪ್ರಸೀದತು ಮಯಿ ಬ್ರಹ್ಮಚಾರಿಣ್ಯ ಸುತ್ತಮಾ ॥

ದುರ್ಗೆಯ ಎರಡನೆ ಸ್ವರೂಪವೇ ಬ್ರಹ್ಮಚಾರಿಣೀ. ಬ್ರಹ್ಮ ಎಂದರೆ ತಪಸ್ಸು. ಇವಳ ಬಲಕೈಯಲ್ಲಿ ಜಪಮಾಲೆ, ಎಡಕೈಯಲ್ಲಿ ಕಮಂಡಲವಿರುತ್ತದೆ.

ಹಿಂದಿನ ಜನ್ಮದಲ್ಲಿ ಹಿಮವಂತನ ಪುತ್ರಿಯಾದ ಇವಳು ನಾರದರ ಉಪದೇಶದಂತೆ ಶಿವಧ್ಯಾನದಿಂದ ಕಠಿಣ ತಪಸ್ಸು ಆಚರಿಸಿದ್ದಳು. ಆದ್ದರಿಂದಲೇ ಬ್ರಹ್ಮಚಾರಿಣೀ ಎಂದು ಹೆಸರಾಯಿತು. ಉಮಾ, ಅಪರ್ಣಾ ಮೊದಲಾದ ನಾಮಗಳಿಂದಲೂ ಉಪಾಸನೆ ಮಾಡಲ್ಪಡುತ್ತಾಳೆ.

ಎರಡನೇ ದಿನದ ಉಪಾಸನೆಯಲ್ಲಿ ಸಾಧಕನ ಮನಸ್ಸು 'ಸ್ವಾಧಿಷ್ಠಾನ' ಚಕ್ರದಲ್ಲಿ ಸ್ಥಿರಗೊಳ್ಳುತ್ತದೆ.

**3. ಚಂದ್ರಘಂಟಾ :**

ಶ್ಲೋಕ : ಪಿಂಡಜ ಪ್ರವರೂಢಾ ಚಂಡಕೋಪಾಸ್ತ್ರೈಕೈರ್ಯುತಾ ।

ಪ್ರಸಾದಂ ತನುತೇ ಮಹ್ಯಂ ಚಂದ್ರ ಘಂಟೇತಿ ವಿಶ್ರುತಾ ॥

ಮೂರನೇ ದಿನದ ಉಪಾಸನೆಯಲ್ಲಿ ದುರ್ಗೆಯನ್ನು ಚಂದ್ರಾಘಂಟಾ ಎಂದು ಪೂಜಿಸಲಾಗುತ್ತದೆ. ಪರಮ ಶಾಂತಿದಾಯಕಳಾದ ಇವಳ ಮಸ್ತಕದಲ್ಲಿ ಗಂಟೆಯ ಆಕಾರದ ಅರ್ಧಚಂದ್ರನಿದ್ದಾನೆ. ಚಿನ್ನದ ಬಣ್ಣದ ಶರೀರದ ಇವಳಿಗೆ ಹತ್ತು ಕೈಗಳಿದ್ದು ಖಡ್ಗ, ಬಾಣ ಮೊದಲಾದ ಅಸ್ತ್ರಶಸ್ತ್ರಗಳನ್ನು ಧರಿಸಿದ್ದಾಳೆ. ಸಿಂಹವಾಹಿನಿಯಾದ ಇವಳು ಯುದ್ದಕ್ಕೆ ಹೊರಟಂತೆ ಕಾಣುವಳು. ಘಂಟೆಯಂತೆ ಭಯಂಕರ ಧ್ವನಿಯಿಂದ ರಾಕ್ಷಸರನ್ನು ನಡುಗಿಸುತ್ತಿದ್ದಾಳೆಂದು ಪ್ರತೀತಿ.

ಮೂರನೇ ದಿನದ ದೈವೀ ಆರಾಧನೆಯಲ್ಲಿ ಸಾಧಕನ ಮನವು 'ಮಣಿಪುರಿ' ಚಕ್ರವನ್ನು ಪ್ರವೇಶಿಸುತ್ತದೆ. ಇದರಿಂದ ಸಾಧಕನಲ್ಲಿ ಪರಾಕ್ರಮ-ನಿರ್ಭಯ ಮೊದಲಾದ ಸದ್ಗುಣಗಳು ಕ್ರೋಢೀಕೃತವಾಗುತ್ತದೆ.

**4. ಕೂಷ್ಮಾಂಡಾ**

ಶ್ಲೋಕ : ಸುರಾಸಂಪ....ಕಲಶಂ ರುಧಿರಾಪ್ಲುತಮೇವ ಚ ।

ದಧಾನಾ ಹಸ್ತ ಪದ್ಮಾಭ್ಯಾಂ ಕೂಷ್ಮಾಂಡಾ ಶುಭದಾಸ್ತುಮೇ ॥

ನಾಲ್ಕನೇ ದಿನದಲ್ಲಿ ಕೂಷ್ಮಾಂಡಾ ಹೆಸರಿನಿಂದ ಆರಾಧಿಸಲ್ಪಡುವ ದುರ್ಗೆಯ ಶರೀರದಲ್ಲಿ ಕಾಂತಿ, ಪ್ರಭೆಯಿಂದ ಸೂರ್ಯನಂತೆ ಪ್ರಕಾಶಮಾನಳು. ಎಂಟು ಕೈಗಳಿಂದ ಶೋಭಿತಳಾದ ಇವಳ ಕೈಯಲ್ಲಿ ಕಮಂಡಲ, ಧನುಷ, ಬಾಣ, ಕಮಲ, ಅಮೃತ ಕಲಶ, ಚಕ್ರ ಮತ್ತು ಗಧೆ , ಜಪಮಣಿ ಇದೆ. ಸಿಂಹವಾಹಿನಿಯಾದ ಈಕೆಗೆ ಬಲಿಯಲ್ಲಿ ಕೂಷ್ಮಾಂಡ (ಕುಂಬಳ)ವನ್ನು ಬಳಸುವುದು ಸಾಮಾನ್ಯ

ನಾಲ್ಕನೇ ದಿನದ ಆರಾಧನೆಯಲ್ಲಿ ಸಾಧಕನ ಮನಸ್ಸು 'ಅನಾಹುತಚಕ್ರ'ದಲ್ಲಿರುವುದು. ಇವಳ

(6ನೇ ಪುಟಕ್ಕೆ ...)


ಶೈಲಪುತ್ರಿ


ಬ್ರಹ್ಮಚಾರಿಣೀ


ಚಂದ್ರಘಂಟಾ


ಕೂಷ್ಮಾಂಡಾ


ಸ್ಕಂದಮಾತಾ


ಕಾತ್ಯಾಯನೀ


ಕಾಲರಾತ್ರಿ


ಮಹಾಗೌರೀ


ಸಿದ್ಧಿರಾತ್ರೀ

## ಹೊಸ ಬೆಳಕು

**ನಲ್ನುಡಿ :**

ಪ್ರಸಾರಯ ಧರ್ಮಧ್ವಜಂ,
ಪ್ರಪೂರಯ ಧರ್ಮಶಂಖಂ ।
ಪ್ರತಾಡಯ ಧರ್ಮದುಂದುಭಿಂ,
ಧರ್ಮಂ ಕುರು ಧರ್ಮಂ ಕುರು ॥

ಅಂದರೆ ಎಲ್ಲೆಡೆಯಲ್ಲಿಯೂ ಧರ್ಮಧ್ವಜವನ್ನು ಹಾರಿಸು, ಧರ್ಮಶಂಖದ ನಾದವನ್ನು ಮೊಳಗಿಸು. ಧರ್ಮವನ್ನು ಆಚರಿಸಲೆಂದು ಧರ್ಮದುಂದುಭಿಯನ್ನು ಬಾರಿಸು, ಬಾರಿಸು.

**ಪುಸ್ತಕ ಪರಿಚಯ :**

**ತುಳುನಾಡಿನ ಇತಿಹಾಸದಲ್ಲಿ ಸ್ಥಾನಿಕರು (ದೇವಸ್ಥಾನದ ಆಡಳಿತೆಯ ಐತಿಹಾಸಿಕ ಅಧ್ಯಯನ)**

**ಲೇಖಕರು : ಪಾದೂರು ಗುರುರಾಜ ಭಟ್**

ಹಿಂದಿನ ಸಂಚಿಕೆಯ ಈ ಅಂಕಣದಲ್ಲಿ "ತುಳುನಾಡಿನ ಇತಿಹಾಸದಲ್ಲಿ ಸ್ಥಾನಿಕರು" ಪುಸ್ತಕದ ಕಿರುಪರಿಚಯ ನೀಡಲಾಗಿತ್ತು. ಹೇಳದೆ ಉಳಿದ ಪುಸ್ತಕದ ಕೆಲವು ಮುಖ್ಯಾಂಶಗಳನ್ನು ಈಗ ಪ್ರಸ್ತಾಪಿಸುತ್ತೇನೆ.

- 'ಸ್ಥಾನಿಕ' ಶಬ್ದದ ಮೂಲರೂಪ 'ಸ್ಥಾನ'. ಚೋಳ>ಚೋಳಿಕ, ಮಂಡಲ>ಮಾಂಡಲಿಕ, ರಾಷ್ಟ್ರ> ರಾಷ್ಟ್ರಿಕ, ಲೋಕ>ಲೌಕಿಕ, ಸ'ಂವ'ತ್ಸ'ರ'> ಸಾವ'ಂತ್ಸರಿಕ', ಸಂಸಾರ>ಸಾಂಸಾರಿಕ ಶಬ್ದೋತ್ಪತ್ತಿಯಾದಂತೆ 'ಸ್ಥಾನ' ಶಬ್ದದಿಂದ 'ಸ್ಥಾನಿಕ' ಉಂಟಾಯಿತು. ಸ್ಥಾನಿಕ ಎಂದರೆ ಸ್ಥಳಕ್ಕೆ ಸಂಬಂಧಪಟ್ಟವನು; ಸ್ಥಳದವನು; ಯಾರಾದರೂ ಒಬ್ಬ ಅಧಿಕಾರಿ; ಪ್ರದೇಶವನ್ನು ಆಳುವವನು ಎನ್ನಬಹುದು.
- ಸ್ಥಾನಿಕರು ಎಂದರೆ ಮೂಲತಃ ಒಂದು ಸ್ಥಳದ ಮೂಲನಿವಾಸಿಗಳು. ಸ್ಥಾನಿಕರು ಈ ಜಿಲ್ಲೆಯ ಮೂಲನಿವಾಸಿಗಳು. ಈ ಜಿಲ್ಲೆಗೆ ಬೇರೆ ನಾಡಿನಿಂದ ಬ್ರಾಹ್ಮಣರು ವಲಸೆ ಬಂದ ಐತಿಹ್ಯ ಸಾಕಷ್ಟು ಬಲವತ್ತರವಾಗಿಯೇ ಇದೆ. ಹೀಗಾಗಿ ಇಲ್ಲಿಗೆ ವಲಸೆ ಬಂದ ಬ್ರಾಹ್ಮಣರು ಇಲ್ಲಿಯೇ ನಿವಾಸಿಗಳಾಗಿದ್ದ ಬ್ರಾಹ್ಮಣರನ್ನು 'ಸ್ಥಾನಿಕರು' ಎಂದು ವ್ಯವಹರಿಸಿದರು.
- ಸ್ಥಾನಿಕ ಬ್ರಾಹ್ಮಣ ವರ್ಗದವರಲ್ಲಿ ಅಂಣ, ಅಯ್ಯ, ಅಪ್ಪ , ಹೆಬ್ಬಾರ, ಕರ್ತಾರ, ಪಂಡಿತ, ಶರ್ಮ, ಓಜ, ಜೋಯಿಸ, ಶಾಸ್ತ್ರಿ ಉಪಾಧ್ಯ, ಭಟ್ಟ, ರಾಯ ಮತ್ತು ಶ್ಯಾನುಭಾಗವೆಂಬ ಕೌಟುಂಬಿಕ ಹೆಸರುಗಳು ಪ್ರಾಮುಖ್ಯವಾಗಿವೆ. ಸ್ಥಾನಿಕ ಎಂಬ ಪದವು ಕುಲನಾಮವಾಗಿ ಎಂದೂ ಬಂದಿಲ್ಲ.
- ದಾಖಲೆಗಳ ಆಧಾರವನ್ನು ಅವಲಂಬಿಸಿ 'ಸ್ಥಾನ' ಎಂದರೆ 'ದೇವಸ್ಥಾನ' ಅಥವಾ ಮಠ,. ಅದರ ಅಧಿಕಾರಿ, ಅಧಿಪತಿ ಅಥವಾ ಒಡೆಯನು ಸ್ಥಾನಿಕನು, ಸ್ಥಾನಪತಿಯು, ಸ್ಥಾನಾಧ್ಯಕ್ಷನು, ಸ್ಥಾನಾಚಾರ್ಯನು ಇಲ್ಲವೆ ಸ್ಥಾನದ ಕರ್ತನು ಎಂಬ ತೀರ್ಮಾನವನ್ನು ಅನುಮಾನವಿಲ್ಲದೆ ಮಾಡಬಹುದು.
- ಕಾಲಕ್ರಮೇಣ ದೇವಾಲಯಗಳ ಅಧಿಕಾರ ನಷ್ಟವಾಯಿತೆಂಬುದೂ ಸಹಜ.

ಸ್ಥಾನಿಕ ಬ್ರಾಹ್ಮಣರ ಅಧೀನದಲ್ಲಿ ಉಳಿದಿರುವ ಕೆಲವೇ ಕೆಲವು ದೇವಾಲಯಗಳು ನಮ್ಮವರ ಕೈಯಲ್ಲಿ ಉಳಿಯಲಿ. ನಮ್ಮವರ ಸಂಘಟನೆ ಇನ್ನೂ ವರ್ಧಿಸಲಿ ಎಂದು ಹಾರೈಸೋಣ

**- ವೈ. ಮೋಹನರಾವ್**

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ.